

ಹೊರಳು ಹಾದಿಯಲ್ಲಿ ವಿರಾಟ್ ಕೊಹ್ಲಿ



ದಾಳಿಕೋರ ಮನಸ್ಥಿತಿ ನೆಚ್ಚಿಕೊಂಡಂತಿರುವ ಆಸ್ಟ್ರೇಲಿಯಾದ ಯುವ ಕ್ರಿಕೆಟಿಗ ಸ್ಯಾಮ್ ಕಾನ್‌ಸ್ಟಸ್

ರಣಜಿ ಕ್ರಿಕೆಟ್‌ನಲ್ಲಿ ಆಗೀಗ ಕೌಶಲಗಳ ಮರುಪೂರಣ ಮಾಡಿಕೊಂಡು ಬರುತ್ತಿದ್ದ ದಿಗ್ಗಜ ಕ್ರಿಕೆಟರ್‌ಗಳನ್ನು ಈಗ ನೆನಪಿಸಿಕೊಳ್ಳಬೇಕಿದೆ. ಟೆಸ್ಟ್ ಕ್ರಿಕೆಟ್‌ನ ಜಾಯಮಾನಕ್ಕೆ ತಕ್ಕ ತಾಳ್ಮೆಯ ಪಾಠ ಕಲಿಸುವ ಆ ಕ್ರಿಕೆಟ್‌ನಲ್ಲಿ ಈಗ ಚೆನ್ನಾಗಿ ಆಡುತ್ತಿರುವವರೂ ಎಲೆಮರೆಯ ಹಣ್ಣುಗಳಾಗಿಯೇ ಉಳಿಯುತ್ತಿದ್ದಾರೆ.

# ಟೆಸ್ಟ್ ಕಾರ್ಮೋಡದ ಘಟ್ಟ ನೆನಪಾಯಿತು ರಣಜಿ ಅಟ್ಟ

■ ವಿಶಾಖ ಎನ್.

ಸ್ಟಾರ್‌ಗಿರಿಯನ್ನು ಪಕ್ಕಕ್ಕೆ ಇಟ್ಟು, ಯಾರು ಚೆನ್ನಾಗಿ ಆಡುವರೋ ಅವರನ್ನು ಭಾರತದ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಆಡಿಸಬೇಕು ಎಂದು ಹರಭಜನ್ ಸಿಂಗ್ ಸೇರಿದಂತೆ ಕೆಲವರು ಇತ್ತೀಚೆಗೆ 'ನನ್ನದೂ ಒಂದು ಇರಲಿ' ಎಂಬಂತೆ ಮಾತನಾಡಿದರು.

ಆಸ್ಟ್ರೇಲಿಯಾ ನೆಲದಲ್ಲಿ ಭಾರತ ತಂಡವು ಬಾರ್ಡರ್ ಗಾವಸ್ಕರ್ ಟ್ರೋಫಿ ಸೋತಿದೆ ಎನ್ನುವುದು ನಿಜ. ಆದರೆ, ಇದಕ್ಕೂ ಮೊದಲು ಎರಡು ಸಲ ಅದನ್ನು ಗೆದ್ದುಕೊಂಡು ಬಂದಿದೆ. ರಿಷಭ್ ಪಂತ್ ಆಗ ಅಪಘಾತಕ್ಕೆ ಈಡಾಗಿರಲಿಲ್ಲ. ನೇಥನ್ ಲಯನ್ ತರಹದ ಅನುಭವಿ ಸ್ಪಿನ್ನರ್ ತಡಕಿ ನೋಡಿಕೊಳ್ಳುವಂತೆ ಅವರು ದಾಳಿಕೋರ ಆಟವನ್ನು ಆಡಿದ್ದರು. ಈ ಸಲವೂ ಅಂಥದ್ದೇ ಆಟ ಆಡುವ ಹಪಹಪಿ ಅವರಿಗೆ ಇತ್ತಾದರೂ ಪರಿಸ್ಥಿತಿ ಅವರಿಗೆ ಪೂರ್ತಿ ಅನುಕೂಲಕರವಾಗಿ ಒದಗಿಬರಲಿಲ್ಲ. ಅದೃಷ್ಟವೂ ಅವರ ಬೆನ್ನಿಗಿರಲಿಲ್ಲ. ಕ್ರಿಕೆಟ್‌ನಲ್ಲಿ ಇವೆಲ್ಲವೂ ಕೂಡಿ ಬಂದರೆ, ರನ್‌ಗಳು ಹರಿಯುತ್ತವೆ. ಹಾಗೆ ಆದಲ್ಲಿ ಬ್ಯಾಟ್ಸ್‌ಮನ್ ಮಾಡುವ ತಪ್ಪುಗಳು ಮಾಫಿಯಾಗುತ್ತವೆ.

ಯುವರಾಜ್ ಸಿಂಗ್ ಮಾತ್ರ ರೋಹಿತ್ ಶರ್ಮ, ವಿರಾಟ್ ಕೊಹ್ಲಿ ರೀತಿಯ ಸ್ಟಾರ್‌ಗಳ ಹಳೆಯ ಕಾಣ್ಕೆಗಳನ್ನು ಮರೆಯಬಾರದು ಎಂದು ಸ್ನೇಹಭಾವದಲ್ಲಿ ಅಭಿಪ್ರಾಯ ವ್ಯಕ್ತಪಡಿಸಿದರು.

ಟೆಸ್ಟ್ ಕ್ರಿಕೆಟ್‌ನಲ್ಲಿ ಆಡಲು ಭಾರತ ಇತ್ತೀಚೆಗೆ ಪರದಾಡುತ್ತಿದೆ. ನ್ಯೂಜಿಲೆಂಡ್ ಎದುರಲ್ಲಿ ತವರು ನೆಲದಲ್ಲೇ ಸರಣಿಯನ್ನು ಸೋತು ಸುಣ್ಣವಾದ ದಿನಗಳು ನೆನಪಿನಿಂದ ಅಳಿಸಿಲ್ಲ. ಮಿಚೆಲ್ ಸ್ಯಾಂಟ್‌ನರ್ ತರಹದ ನೆಚ್ಚುಗೆಯಿಲ್ಲದ ಸ್ಪಿನ್ನರ್ ಬಂದು, ಭಾರತದ ಬ್ಯಾಟ್ಸ್‌ಮನ್‌ಗಳ ಜಂಘಾಬಲ ಉಡುಗಿಹೋಗುವಂತೆ ಮಾಡಿದ್ದನ್ನು ನೋಡಿದ್ದೆವು.

ಈ ಸಂದರ್ಭದಲ್ಲಿ ವೀಕ್ಷಕ ವಿವರಣೆಕಾರ ಹರ್ಷ ಭೋಗ್ಲೆ, ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ತಮ್ಮ